**ಸಾಕ್ಷಿಗೆ ದಿನಾಂಕ 06.12.2025 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:**

ನನ್ನ ಮತ್ತು ಆರೋಪಿಯ ಮದ್ಯೆ ಕೃಷಿ ಉಪಕರಣಗಳ ವ್ಯಾಪಾರವನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲು ಆರೋಪಿಯ ಜೊತೆ ದಿನನಿತ್ಯ ವ್ಯವಹಾರಗಳು ನಡೆಯುತ್ತಿತ್ತು ಎಂದರೆ ಸರಿ. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿಯು ಖಾತೆಗೆ ನೇರವಾಗಿ ಹಣ ಪಾವತಿ ಮಾಡುತ್ತಿದ್ದರು. ಅದಕ್ಕೆ ಸಂಬಂಧಿಸಿದಂತೆ ಯಾವುದೇ ಬ್ಯಾಂಕ್ ಖಾಸಾ ಎಕ್ಸಟ್ರಾಕ್ಟಗಳನ್ನು ಹಾಜರುಪಡಿಸಿರುವುದಿಲ್ಲ, ಮುಂದೆ ಹಾಜರುಪಡಿಸುತ್ತೇನೆ.

ಈ ಪ್ರಕರಣವನ್ನು ಆರೋೇಪಿಯು ನನ್ನ ಬಳಿ ರೂ.10 ಲಕ್ಷಗಳು ಕೈಸಾಲವನ್ನಾಗಿ ಪಡೆದಿರುತ್ತಾರೆಂದು ಹೂಡಿರುತ್ತಾರೆಂದರೆ ಸರಿ. ಸದರಿ ಸಾಲಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತ ದಾಹಲೆಗಳು ಹಾಜರುಪಡಿಸಿರುವುದಿಲ್ಲ, ಸಾಕ್ಷಿಯು ಮುಂದುವರೆದ ನಮ್ಮ ಮದ್ಯೆ ಆ ರೀತಿ ಯಾವುದೇ ದಾಖಲೆಗಳನ್ನು ಮಾಡಿಕೊಂಡಿರಲಿಲ್ಲ. ನಾನು ಆರೋಪಿಗೆ ಸಾಲ ನೀಡಿದಕ್ಕೆಂದು ಯಾವುದೇ ಪ್ರಾಮಿಸರಿ ನೋಟ್ ಅಥವಾ ಕರಾರು ಪತ್ರಕ್ಕೆ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದ ವಿಶ್ವಾಸದ ಮೇಲೆ ನೀಡಿರುತ್ತೇನೆಂದು ನುಡಿಯುತ್ತಾರೆ. ಆರೋಪಿಯು ನನ್ನ ಬಳಿ ಯಾವುದೇ ಸಾಲವನ್ನು ಪಡೆದಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಕಂಪನಿಯ ಖಾತೆಯಿಂದ ರೂ.4 ಲಕ್ಷಗಳ ಮೊತ್ತವನ್ನು ಸಾಲವನ್ನು ನೀಡುವುದಕೆ ತೆಗೆದುಕೊಂಡಿರುತ್ತೇನೆಂದು ನನ್ನ ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ. ನನ್ನ ಬಳಿ ರೂ.3 ಲಕ್ಷಗಳು ಸ್ವಂತ ಉಳಿಕೆ ಹಣವಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಉಳಿದ ಮೊತ್ತವನ್ನು ನನ್ನ ಸ್ನೇಹಿತರಾದ ವಿಜಯಕುಮಾರ ಎಂಬುವವರ ಬಳಿಯಿಂದ ಪಡೆದು ಆರೋಪಿಗೆ ನೀಡಿರುತ್ತೇನೆ. ವಿಜಯಕುಮಾರ ರವರಿಂದ ಹಣ ಪಡೆದಿರುವ ವಿಷಯವನ್ನು ನನ್ನ ನೋಟಿಸ್, ದೂರು ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲ. ವಿಜಯಕುಮಾರ ರವರನ್ನು ನಾನು ನನ್ನ ಪರವಾಗಿ ಸಾಕ್ಷಿಯನ್ನಾಗಿ ತೋರಿಸಿರುವುದಿಲ್ಲ. ನನ್ನ ನೋಟಿಸ್, ದೂರು ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ ಯಾರ ಸಮಕ್ಷಮ ಯಾವ ವರ್ಷ, ದಿನಾಂಕ ಹಾಗೂ ಸಮಯದಲ್ಲಿ ಆರೋಪಿಗೆ ಹಣ ನೀಡಿರುತ್ತೇನೆಂದು ತಿಳಿಸಿರುವುದಿಲ್ಲವೆಂದರೆ ಸರಿ.

ಚೆಕ್ಕನ್ನು ನಗದೀಕರಣಕ್ಕೆ ನೀಡುವ ಮೊದಲು ಆರೋಪಿಗೆ ತಿಳಿಸಿರುವುದಿಲ್ಲವೆಂದರೆ ಸಾಕ್ಷಿಯು ಆರೋೇಪಿಯು ನನಗೆ ನಮೂದು ಮಾಡಿದ ದಿನಾಂಕದಂದು ಚೆಕ್ಕನ್ನು ನಗದೀಕರಣಕ್ಕೆ ಹಾಕಿಕೊಳ್ಳಿ ಎಂದು ತಿಳಿಸಿದ್ದು ನಂತರ ಅವರು ಸ್ಪಂದಿಸದೆ ಇದ್ದ ಕಾರಣಕ್ಕೆ ಚೆಕ್ಕನ್ನು ನಗದೀಕರಣಕ್ಕೆ ಹಾಕಿರುತ್ತೇನೆ. ಚೆಕ್ಕನ್ನು ನನ್ನ ಕಚೇರಿಯಲ್ಲಿ ಪಡೆದಿರುತ್ತೇನೆ. ಆರೋಪಿಯಿಂದ ನಾನೇ ಸ್ವತಃ ಪಡೆದಿರುತ್ತೇನೆ. ನಾನು ಆರೋೇಪಿಯಿಂದ ಖಾಲಿ ಚೆಕ್ಕನ್ನು ಪಡೆದಿರುತ್ತೇನೆಂದರೆ ಭರ್ತಿ ಮಾಡಿದ ಚೆಕ್ಕನ್ನು ಆರೋೇಪಿಗೆ ನೀಡಿರುತ್ತೇನೆ. ನಾನು ಕೃಷಿ

ಉಪಕರಣಗಳನ್ನು ಮಾರಾಟ ಮಾಡುವುದನ್ನು ಹೊರತು ಪಡಿಸಿ ಬೇರೆ ವ್ಯಾಪಾರ ಮಾಡುವುದಿಲ್ಲ. ನಾನು ಬಡ್ಡಿಗೆ ಹಣ ನೀಡುವ ವ್ಯವಹಾರವನ್ನೂ ಸಹ ಮಾಡುವುದಿಲ್ಲ. ನನ್ನ ಬಳಿ ಬಡ್ಡಿಗೆ ಹಣ ನೀಡುವ ಪರವಾನಿಗೆಯೂ ಸಹ ಇರುವುದಿಲ್ಲ. ಆರೋಪಿಗೆ ನೀಡಿದಂತೆ ನಾನು ಬೇರೆ ನನ್ನ ಗಳೆಯರಿಗೂ ಸಹ ಸಾಲವನ್ನು ನೀಡಿರುತ್ತೇನೆ. ಆರೋಪಿಗೆ ರೂ.10 ಲಕ್ಷ ನೀಡಿದಂತೆ ಬೇರೆ ಯಾರಿಗೂ ಅಷ್ಟೊಂದು ಮೊತ್ತವನ್ನು ನೀಡಿರುವುದಿಲ್ಲ.

ಆರೋಪಿಯ ಇನ್ನೊಂದು ಚೆಕ್ಕನ್ನು ಬಳಸಿಕೊಂಡು ಅವರಿಂದ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದಂತೆ ಹಣ ಬಂದಿಲ್ಲ ಎಂದು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿ. ಎರಡು ಪ್ರಕರಣಗಳಲ್ಲಿ ಇರುವಂತಹ ಚೆಕ್ಕುಗಳ ಸಂಖ್ಯೆಯು ಕ್ರಮವಾಗಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿಯು ನೀಡಿದಂತಹ ಚೆಕ್ಕುಗಳ ಸಂಖೆಯು 628543 ಮತ್ತು 628545 ಆಗಿರುತ್ತದೆ ಎಂದರೆ ಸರಿ. ಸದರಿ ಚೆಕ್ಕುಗಳನ್ನು ಆರೋಪಿಯ ಜೊತೆ ವ್ಯಾಪಾರ ಶುರು ಮಾಡುವ ಮೊದಲು ಪಡೆದಿರುತ್ತೇನೆಂದರೆ ಸರಿಯಲ್ಲ. ಆರೋಪಿಯಿಂದ ವ್ಯಾಪಾರ ಶುರುವಿನಲ್ಲಿ ಪಡೆದಂತಹ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಬೇರೆ ಮೊತ್ತವನ್ನು ನಮೂದು ಮಾಡಿ ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆಂದರೆ ಸರಿಯಲ್ಲ.

ಈ ಪ್ರಕರಣದಲ್ಲಿರುವ ಚೆಕ್ಕನ್ನು ಹಾಗೂ ಇನ್ನೊಂದು ಪ್ರಕರಣದಲ್ಲಿ ಇರುವಂತಹ ಚೆಕ್ಕು ಹೊರತುಪಡಿಸಿ ಮೊತ್ತಂದು ಆರೋಪಿಯ ಖಾಲಿ ಚೆಕ್ಕು ನನ್ನ ಬಳಿ ಇರುತ್ತದೆ ಎಂದರೆ ಆರೋಪಿ ನನಗೆ ಎರಡೆ ಚೆಕ್ಕುಗಳು ನೀಡಿರುತ್ತಾರೆ. ರೂ.10 ಲಕ್ಷಗಳನ್ನು ಸಾಲವನ್ನಾಗಿ ಪಡೆಯುವ ಸಂದರ್ಭದಲ್ಲಿ ಆರೋಪಿಯು ಚೆಕ್ಕನ್ನು ನನಗೆ ನೀಡಿರುತ್ತಾರೆ. ಆರೋಪಿಯ ಬಳಿಯಿಂದ ಭದ್ರತೆಗೆಂದು ಚೆಕ್ಕನ್ನು ಪಡೆದು ಸಾಲವನ್ನು ನೀಡಿರುತ್ತೇನೆಂದರೆ ಸರಿ.

ನನ್ನ ಮತ್ತು ಆರೋಪಿಯ ನಡುವೆ ಒಂದೇ ಬಿಲ್ಲಿನಲ್ಲಿ ರೂ. 10 ಲಕ್ಷ ಮೊತ್ತದ ವ್ಯಾಪಾರವು ಆಗಿರುವುದಿಲ್ಲ. ಒಂದು ಬಾರಿ ರೂ.4.50,000/- ಗಳಿಗೆ ವ್ಯಾಪಾರ ಆಗಿರುತ್ತದೆ ಅದಕ್ಕೂ ಹೆಚ್ಚು ಆಗಿರುವುದಿಲ್ಲ. ರೂ.10 ಲಕ್ಷಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ದಾವೆಯನ್ನು ಹೂಡಿರುವುದಿಲ್ಲ ಇದು ಒಂದೇ ದಾವೆಯನ್ನು ಹೂಡಿರುತ್ತೇನೆ.

ಆರೋಪಿಯು ಪಡೆದ ಸಾಲ ತಿರಿಸಲು ನೀಡಿದ ಭರ್ತಿ ಮಾಡಿದ ಚೆಕ್ಕನ್ನು ನಗಧಿಕರಣಕ್ಕೆ ಕೊಟ್ಟು ಅಮಾನ್ಯಗೊಂಡ ನಂತರ ಈ ಪ್ರಕರಣವನ್ನು ಹೂಡಿರುತ್ತೇನೆ. ನಾನು ಆರೋಪಿಗೆ ಯಾವುದೇ ಸಾಲವನ್ನು ನೀಡಿರುವುದಿಲ್ಲ, ಅದರ ತಿರುವಳಿಗಾಗಿ ಆರೋಪಿಯು ಯಾವುದೇ ಚಕ್ಕನ್ನು ಕೊಟ್ಟಿರುವುದಿಲ್ಲ, ಆರೋಪಿಯ ಚೆಕ್ಕನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆಂದರೆ ಸರಿಯಲ್ಲ. ಆರೋಪಿಗೆ ವ್ಯಾಪಾರದಲ್ಲಿ ನಷ್ಟವಾಗಿರುವ ವಿಷಯ ಗೊತ್ತಿದಿದ್ದರೂ ಸಹ ಅವರ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣವನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಭದ್ರತೆಗೆಂದು ಪಡೆದ ಖಾಲಿ ಚೆಕ್ಕನ್ನು

ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ಮತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**